

ಬಹಳ ದೊಡ್ಡದು. ದುರಂತವೆಂದರೆ ನಮಗೆ ಕಪ್ಪೆಗಳ ಬಗ್ಗೆ ಅಂತಹ ವ್ಯಾಮೋಹವಾಗಲಿ, ಒಳ್ಳೆಯ ಅಭಿಪ್ರಾಯವಾಗಲೀ ಇಲ್ಲವೇ ಇಲ್ಲ. ಅತಿಯಾಗಿ ವರ್ಣಿಸಿದರೆ ಏನಿವನು ಕಪ್ಪೆಯ ಥರ ವಟಗುಟ್ಟುತ್ತಿದ್ದಾನೆ ಎಂದು ನೀವು ರೇಗಲೂಬಹುದು. ತೀರಾ ಹತ್ತಿರ ಹೋಗಿ ಅವುಗಳ ವೈಶಿಷ್ಟ್ಯತೆ ಗಮನಿಸಿದರೆ ಈ ಪ್ರಕೃತಿಯ ಅಮೋಘ ಸೃಷ್ಟಿಗಳಲ್ಲಿ ಇವೂ ಒಂದೆಂಬುದು ಮನವರಿಕೆಯಾಗುತ್ತದೆ. ನೀವೂ ಊಹಿಸದ ಬಣ್ಣದ ಕಪ್ಪೆಗಳು ಇಲ್ಲಿದ್ದಾವೆ. ಒಂದೊಂದರ ಕಥೆಯೂ ಅಷ್ಟೇ ವರ್ಣರಂಜಿತವಾಗಿದೆ. ಆದರೆ ಇಲ್ಲಿ ಅವುಗಳನ್ನು ಹುಡುಕುವುದು ನೆಲದೊಳಗೆ ವಜ್ರಗಳ ಹೆಕ್ಕಿ ತೆಗೆದಷ್ಟೇ ಕಠಿಣ ಕೆಲಸ. ಅಂದಹಾಗೆ ಇಲ್ಲೊಂದು ವಿಶೇಷವಾದ ಹಪ್ಪಟ್ಟೆ ಹಸಿರು ಹಾವಿದೆ. ಅದು ನೀವು ನೋಡಲೇಬೇಕು, ಬೆಟ್ಟದ ಮತ್ತೊಂದು ಭಾಗಕ್ಕೆ ಇಳಿದು ಹೋಗೋಣ ಬನ್ನಿ' ಎಂದು ರಂಜೀತ್ ಮುಂದೆ ನಡೆದನು. ಅವನು ಮಾತ್ರ ಕಿಂಚಿತ್ತೂ ಆಯಾಸವಾಗಿರಲಿಲ್ಲ. ಆತನ ಹೆಂಡತಿ ತನ್ನ ನಗು ಕಳೆದುಕೊಂಡಿರಲಿಲ್ಲ.

ತೋಯ್ದು ತೊಪ್ಪೆಯಾಗಿದ್ದ ನಾವು ನಾಳೆ ತೆಗೆದರಾಯಿತು ಎಂದು ಗೊಣಗಿಕೊಂಡೆವು. ಆದರೆ ತೋರಿಸಲೇಬೇಕೆಂಬ ಅವನ ಉತ್ಸಾಹ ಸ್ವಲ್ಪವೂ ಕುಂದಿರಲಿಲ್ಲ. ತಣ್ಣಗೆ ಹರಿಯುತ್ತಿದ್ದ ಹಳ್ಳಗಳನ್ನು ದಾಟಿ ಅವನು ನಡೆದ. 'ಲಾರ್ಜ್ ಸ್ಕೇಲ್ಡ್ ಪಿಟ್ ವೈಪರ್ ಸಿಗೋದೇ ಕಷ್ಟ. ಇಂತಹ ಛಾನ್ಸು ಮಿಸ್ ಮಾಡ್ಕೊಳೋದುಂಟೆ ನಡೀರ್ ಸರ್' ಎಂದು ಶಶಿ ನನ್ನ ಎಳಕೊಂಡು ಹೊರಟರು. ನಮ್ಮಂತೆಯೇ ಬೇರೆ ಬೇರೆ ರಾಜ್ಯಗಳಿಂದ ಬಂದಿದ್ದ ಅನೇಕ ಹುಚ್ಚರು ಅಲ್ಲಲ್ಲಿ ಟಾರ್ಚು ಬಿಟ್ಟು ಹಾವನ್ನು ಹುಡುಕುತ್ತಿದ್ದರು. ಹಸಿರು ಗಿಡದ ಮೇಲೆ ಕೂರುವ ಈ ಹಾವನ್ನು ಹುಡುಕುವುದು ಅಸಾಧ್ಯದ ಮಾತು. ಆದರೆ ರಂಜೀತ್ ಮತ್ತವನ ಪತ್ನಿಯ ಕಣ್ಣುಗಳು ತುಂಬಾ ತೀಕ್ಷ್ಣ. ನಮಗೊಂದು ಕಡೆ ನಿಲ್ಲುವಂತೆ ಹೇಳಿ ಹಾವು ಹಿಡಿಯುವ ರಾಡ್ ಹಿಡಿದು ಅವರಿಬ್ಬರು ಸರಸರ ಗುಡ್ಡ ಹತ್ತಿದರು. ನಮಗಂತೂ ಲೋಡುಗಟ್ಟಲೆ ಮುತ್ತಿಕೊಂಡಿದ್ದ ಮಂಜು ಬಿಟ್ಟು ಮತ್ತೇನೂ ಕಾಣುತ್ತಿರಲಿಲ್ಲ.

ಸುಮಾರು ಅರ್ಧಗಂಟೆ ಕಳೆಯುವುದರಲ್ಲಿ ರಂಜೀತ್, 'ಇಲ್ಲಿ ಬನ್ನಿ' ಎಂದು ಕೂಗಿದ. ಮುಳ್ಳಿನ ಗಿಡಗಳ ದಾಟಿಕೊಂಡು ಅವನು ಹೇಳಿದ ಸ್ಥಳಕ್ಕೆ ಹೋಗುವುದು ಕೊಂಚ ತ್ರಾಸೇ ಆಗಿತ್ತು. ಹಠಬಿದ್ದು ತೂರಾಡುತ್ತಾ ಹೋದೆವು. ಒಂದು ಗಿಡದ ಮೇಲೆ ನಾಲಿಗೆ ಬಿಡುತ್ತಾ ಆ ಹಸಿರುಹಾವು ಕೂತಿತ್ತು. ಇದರದೆ ಪ್ರಜಾತಿಯ ಭಿನ್ನ ಬಣ್ಣದ ಉರಗಗಳನ್ನು ನಾನು ತೀರ್ಥಹಳ್ಳಿ, ಆಗುಂಬೆಯಲ್ಲಿ ನೋಡಿದ್ದೆನಾದರೂ ಇದು ಕೊಂಚ ವಿಶೇಷವಾಗಿತ್ತು. ಅದರ ಮೈಮೇಲಿನ ಚರ್ಮದ ಚಕ್ಕೆಗಳು ಅಗಲಗಾತ್ರದವು. ಕಚ್ಚಿದರೆ ತಕ್ಕ ಮಟ್ಟಿಗೆ ವಿಷ ಉಣಿಸಬಲ್ಲ ಹಾವು. ಇದರ ಕಡಿತದಿಂದ ಮನುಷ್ಯ ಸಾಯದಿದ್ದರೂ ನರಮಂಡಲದ ಮೇಲೆ ವ್ಯತಿರಿಕ್ತ ಪರಿಣಾಮಗಳಂತೂ ಆಗೇ ಆಗುತ್ತವೆ